**ಸಿ.ಮಿಸ್.ನಂಃ4007/2023**

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 28.07.2023.</u>**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರರಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಮಾಣ ಪತ್ರದಲ್ಲಿ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ನನ್ನ ಮಗಳ ಜನನ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದಾಗ ಎದುರುದಾರರು ನನ್ನ ಮಗಳ ಜನನದ ದಿನಾಂಕವು ಅವರ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ ಎಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

ಎದುರುದಾರ ಕಛೇರಿಯವರು ನೀಡಿದ ಅಲಭ್ಯ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿಪಿ-1** ಎಂದು ಗುರುತಿಸಲಾಯಿತು. ನನ್ನ ಮತ್ತು ನನ್ನ ಗಂಡನ ಬಾಬ್ತು ಆಧಾರ ಕಾರ್ಡ್, ನನ್ನ ಮಗಳ ವ್ಯಾಸಂಗ ಪತ್ರದ, ನೋಟರಿ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು **ನಿಪಿ-2 ರಿಂದ ನಿಪಿ-4** ಎಂದು ಗುರುತಿಸಲಾಯಿತು. ಅಸಲು ದಾಖಲೆಗಳನ್ನು ಸಾಕ್ಷಿದಾರರಿಗೆ ಹಿಂದುರುಗಿಸಲಾಯಿತು.

**<u>ಪಾಟೀ ಸವಾಲುಃ ಶ್ರೀಮತಿ ಜಿ ಬಿ ವಕೀಲರಿಂದ ಎದುರುದಾರರ ಪರವಾಗಿಃ</u>**

**ನಿಪಿ-1 ರಿಂದ ನಿಪಿ-4 ರ** ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿಕೊಂಡು ತಂದು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನನ್ನ ಮಗಳು ಬೆಂಗಳೂರಿನಲ್ಲಿ ಹುಟ್ಟಿಲ್ಲ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ,**

**13ನೇ ಅ ಮು ಮ ದಂ ನ್ಯಾ**